# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/GLB/1264/2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 22/12/2021.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀ ಗಾಡಿ ಕ್ರಿಷ್ಣಪ್ಪ, ಪೊಲೀಸ್ ಕಾನ್ಸ್‌ಟೇಬಲ್, 303, ಟ್ರಾಫಿಕ್ ಪೊಲೀಸ್ ಠಾಣೆ, ಬಳ್ಳಾರಿ, – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಬಳ್ಳಾರಿ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಗಾಡಿ ಕ್ರಿಷ್ಣಪ್ಪ, ಪೊಲೀಸ್ ಕಾನ್ಸ್‌ಟೇಬಲ್, 303, ಟ್ರಾಫಿಕ್ ಪೊಲೀಸ್ ಠಾಣೆ, ಬಳ್ಳಾರಿ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಪರಮೇಶ್ವರ ಬಾಬು ವಾಗ್‌ಮೋಡಿ ಬಿನ್ ಬಾಬು ವಾಗ್‌ಮೋಡಿ, ಮನೆ ನಂ: 307, ಭೂಸೆ ಗ್ರಾಮ, ಮಂಗಳವೇಡ–ತಾ: ಸೊಲ್ಲಾಪುರ–ಜಿಲ್ಲೆ, ಮಹಾರಾಷ್ಟ್ರ ರಾಜ್ಯ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಮಾಹಿತಿ :–**

i) ದೂರುದಾರರು ದಿನಾಂಕ: 21–02–2018 ರಂದು ಬೆಳಿಗ್ಗೆ 07 ಗಂಟೆಗೆ ಬಳ್ಳಾರಿ ಮೋತಿ ಸರ್ಕಲ್ ನಿಂದ ಆಂದ್ರಪ್ರದೇಶದ ಗುತ್ತಿಗೆ ಹೋಗುತ್ತಿರುವಾಗ ರಾಯಲ್ ಸರ್ಕಲ್ ಬಂದಾಗ ಎದುರುದಾರರು ಹಾಗೂ ಅವರ ಜೊತೆ ಇಬ್ಬರು ಸಹೋದ್ಯೋಗಿಗಳು ಬಂದು, ದೂರುದಾರರ ಲಾರಿಯನ್ನು ನಿಲ್ಲಿಸಿ, ನೋ ಎಂಟ್ರಿ ರಸ್ತೆ ಆಗಿದೆ, ಸ್ಟೇಷನ್‌ಗೆ ಲಾರಿ ತಿರುಗಿಸು ಎಂದು ಹೇಳಿ, ಎದುರುದಾರರು ದೂರುದಾರರ ಲಾರಿಯನ್ನು ಹತ್ತಿ ಸದರಿ ಲಾರಿಯನ್ನು ಟ್ರಾಫಿಕ್ ಪೊಲೀಸ್ ಸ್ಟೇಷನ್ ಮುಂದೆ ಕರೆದುಕೊಂಡು ಬಂದು, ಲಾರಿಯ ಕೀ ಯನ್ನು ತೆಗೆದುಕೊಂಡು ದೂರುದಾರರನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ.

ii) ಎದುರುದಾರರು ದೂರುದಾರರಿಂದ ಲಾರಿಗೆ ಸಂಬಂಧಿಸಿದ ದಾಖಲೆಗಳನ್ನ ತರಿಸಿ, ಪರಿಶೀಲಿಸಿದ ನಂತರ ದೂರುದಾರರಿಂದ 8,000/- ರೂ. ದುಡ್ಡು ಕೊಟ್ಟು ಹೋಗು, ಇಲ್ಲವಾದ್ದಲ್ಲಿ ಕೋರ್ಟ್‌ಗೆ ಕೇಸ್ ಮಾಡುತ್ತೇವೆಂದು ತಿಳಿಸಿರುತ್ತಾರೆ. ನಂತರ ದೂರುದಾರರು ಲಾರಿ ಮಾಲೀಕರ ಜೊತೆ ಮಾತನಾಡಿ, ಸೂಚನೆಯನ್ನು ಪಡೆದುಕೊಂಡು, ಎದುರುದಾರರು ಲಂಚದ ಬೇಡಿಕೆ ಇಟ್ಟ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಂತರ ಎದುರುದಾರರು ತಮ್ಮ ಮೊಬೈಲ್ ನಂ. 9916369970ನ್ನು ದೂರುದಾರರಿಗೆ ಕೊಟ್ಟು, ಹಣ ತಂದ ಕೂಡಲೇ ಬೇಟಿ ಮಾಡು ಎಂದು ಸೂಚಿಸಿರುತ್ತಾರೆ. ದೂರುದಾರರು ತಮ್ಮ ಮಾಲೀಕರಿಗೆ ಪೋನ್ ಮಾಡಿ ಅವರ ಸೂಚನೆಯಂತೆ, ಹಾಗೂ ಅವರು ಕೊಟ್ಟ ಎಸಿಬಿ ಮೊಬೈಲ್ ನಂ: 9480806243 ಗೆ ಪೋನ್ ಮಾಡಿ ಠಾಣೆಗೆ ಬಂದು ಎದುರುದಾರರ ವಿರುದ್ಧ ದಿನಾಂಕ: 21-02-2018 ರಂದು ದೂರು ನೀಡಿರುತ್ತಾರೆ ಹಾಗೂ ಸಂಭಾಷಣೆಯಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಅದರಂತೆ, ಮೊಕದ್ದಮೆ ಸಂಖ್ಯೆ: 01/2018 ಪಿಸಿ ಕಾಯ್ದೆ ಕಲಂ 1988 ಕಲಂ 7ರ ನ್ವಯ ಪ್ರ.ವ. ವರದಿ ದಾಖಲಾಗಿರುತ್ತದೆ.

iii. ದಿನಾಂಕ: 21-02-2018 ರಂದು ಸದರಿ ದೂರಿನ ಆಧಾರದ ಮೇಲೆ ತನಿಖಾಧಿಕಾರಿಯು ಪಂಚರಾದಂತಹ ಶ್ರೀ ಚೆನ್ನಬಸವನಗೌಡ ಪಂಚ-1, ಶ್ರೀ ಮಂಜುನಾಥ ಪಂಚ-2 ಇವರನ್ನು ಬರಮಾಡಿಕೊಂಡರು ಹಾಗೂ ದೂರುದಾರರನ್ನು ಪರಿಚಯಿಸಿ ದೂರಿನ ವಿಚಾರವನ್ನು ತಿಳಿಸಿಕೊಟ್ಟಿರುತ್ತಾರೆ. ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ 7000/- ರೂ.ಗಳನ್ನು (500 x 14) ಹಾಜರುಪಡಿಸಿರುತ್ತಾರೆ. ಸದರಿ ಹಣದ ಮೌಲ್ಯ ಮತ್ತು ನಂಬರನ್ನು ಪಂಚ-1 ರವರು ಪರಿಶೀಲಿಸಿರುತ್ತಾರೆ ಹಾಗೂ ಪಂಚ-2 ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ತನಿಖಾಧಿಕಾರಿಯ ಸೂಚನೆಯ ಮೇರೆಗೆ, ಪಂಚ-1 ರವರು ಪೋಲೀಸ್ ಸಿಬ್ಬಂದಿಯಿಂದ ಪಿನಾಫ್ತಲಿನ್ ಪೌಡರ್ ಲೇಪಿತ ಲಂಚದ ಹಣವನ್ನು ಎಣಿಸಿ ದೂರುದಾರರ ಜೀನ್ಸ್ ಪ್ಯಾಂಟಿನ ಬಲಗಡೆ ಮುಂಬಾಗದ ಪ್ಯಾಕೇಟ್‌ನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರ ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಎರಡೂ ಕೈಗಳಿಂದ ತಲೆ ಕೂದಲನ್ನು ಸವರಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರು ಎದುರುದಾರರೊಂದಿಗೆ ಮಾತನಾಡಿದಾಗ, ಸದರಿ ಸಂಭಾಷಣೆಯನ್ನು ತನ್ನ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಡುವಂತೆ ತಿಳಿಸಿರುತ್ತಾರೆ. ಈ ಸಂಬಂಧವಾಗಿ ವಹಿಸಿಕೊಡುವ ಪಂಚನಾಮೆಯನ್ನು ದಿ: 21/02/2018 ರಂದು ರಾತ್ರಿ 9.30 ರಿಂದ 11.30 ರವರೆಗೆ ಬರೆದಿರುತ್ತಾರೆ.

iv. ನಂತರ, ತನಿಖಾಧಿಕಾರಿ ದೂರುದಾರರನ್ನು ಪಂಚರನ್ನು ಹಾಗೂ ಸಿಬ್ಬಂದಿಯನ್ನು ಕರೆದುಕೊಂಡು, ಬಳ್ಳಾರಿ-ಬೆಂಗಳೂರು ರಸ್ತೆಯ ಹೊಸ ಕೆ.ಎಸ್.ಆರ್.ಟಿ.ಸಿ ನಿಲ್ದಾಣ ಹತ್ತಿರ ಇರುವ ಟ್ರಾಫಿಕ್ ಪೋಲೀಸ್ ಠಾಣೆಯ ಹತ್ತಿರ ಬಂದಿರುತ್ತಾರೆ. ತನಿಖಾಧಿಕಾರಿ ಮತ್ತೊಮ್ಮೆ ದೂರುದಾರರಿಗೆ ಮತ್ತು ಪಂಚರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರನ್ನು ಭೇಟಿ ಮಾಡಲು

ಕಳುಹಿಸಿರುತ್ತಾರೆ. ದೂರುದಾರರು ರಾತ್ರಿ 12.45ರ ವೇಳೆಗೆ ವಾಪಸ್ಸು ತನಿಖಾಧಿಕಾರಿಯ ಹತ್ತಿರ ಬಂದು, ಎದುರುದಾರರು ಮನೆಯಲ್ಲಿ ಇರುವುದಾಗಿ ಹಾಗೂ ಬೆಳಿಗ್ಗೆ 6.00 ಗಂಟೆಗೆ ಬರುವಂತೆ ತಿಳಿಸಿರುತ್ತಾರೆಂದು ಹೇಳಿರುತ್ತಾರೆ. ನಂತರ ತನಿಖಾಧಿಕಾರಿ ಎಲ್ಲಾ ಸಿಬ್ಬಂದಿಯನ್ನು ಕರೆದುಕೊಂಡು ರಾತ್ರಿ 1.00 ಗಂಟೆಗೆ ಠಾಣೆಗೆ ವಾಪಸ್ಸಾಗಿ ದಿ: 22/02/2018 ರಂದು ಬೆಳಗಿನ ಜಾವ 1.30 ರಿಂದ 2.30 ರವರೆಗೆ ಹಿಂದಿರುಗಿ ಬಂದ ಪಂಚನಾಮೆಯನ್ನು ಬರೆದಿರುತ್ತಾರೆ. ನಂತರ, ದಿ: 22/02/2018 ರಂದು ತನಿಖಾಧಿಕಾರಿಯವರು ದೂರುದಾರರನ್ನು, ಪಂಚರನ್ನು ಬೆಳಗಿನ ಜಾವ 4.30ರ ವೇಳೆಯಲ್ಲಿ ಬರಮಾಡಿಕೊಂಡು ದಿ: 21-02-2018ರ ವಹಿಸುವಿಕೆ ಪಂಚನಾಮೆಯ ಅಂಶವನ್ನು ಪುನರ್ ಮನನ ಮಾಡಿರುತ್ತಾರೆ. ಈ ಸಂಬಂಧವಾಗಿ ಮಹಜರ್‌ನ್ನು ಬೆ: 4.35 ರಿಂದ 5.30 ರವರೆಗೆ ಪಂಚರ ಸಮಕ್ಷಮ ಮಹಜರನ್ನು ಬರೆದಿರುತ್ತಾರೆ.

v. ದಿ: 22/02/2018 ರಂದು ತನಿಖಾಧಿಕಾರಿಯವರು ದೂರುದಾರರನ್ನು, ಪಂಚರನ್ನು ಮತ್ತು ಸಿಬ್ಬಂದಿಯವರನ್ನು ಕರೆದುಕೊಂಡು ಬೆ: 5.40 ಕ್ಕೆ ಠಾಣೆಯನ್ನು ಬಿಟ್ಟು ಬಳ್ಳಾರಿ-ಬೆಂಗಳೂರು ರಸ್ತೆಯ ಹೊಸ ಕೆ.ಎಸ್.ಆರ್.ಟಿ.ಸಿ ನಿಲ್ದಾಣ ಹತ್ತಿರ ಇರುವ ಟ್ರಾಫಿಕ್ ಪೊಲೀಸ್ ಠಾಣೆಯ ಹತ್ತಿರ ಬಂದಿರುತ್ತಾರೆ. ಮತ್ತೊಮ್ಮೆ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರನ್ನು ಭೇಟಿ ಮಾಡಲು ಕಳುಹಿಸಿರುತ್ತಾರೆ. ನಂತರ ದೂರುದಾರರು ಎದುರುದಾರರನ್ನು ಸುಮಾರು ಹೊತ್ತು ಕಾದರೂ ಸಹ ಬಾರದ ಕಾರಣ, ದೂರುದಾರರು ಬೆಳಿಗ್ಗೆ ಸುಮಾರು 7.30ರ ವೇಳೆಯಲ್ಲಿ ತನ್ನ ಮೊಬೈಲ್‌ನಿಂದ ಎದುರುದಾರರಿಗೆ ಕರೆ ಮಾಡಿದಾಗ, ಎದುರುದಾರರು 10 ನಿಮಿಷದಲ್ಲಿ ಬರುವುದಾಗಿ ತಿಳಿಸಿದರಿಂದ, ದೂರುದಾರರು ಕಾದಿದ್ದು, ನಂತರ, ಎದುರುದಾರರು ಸಿವಿಲ್ ಡ್ರೆಸ್‌ನಲ್ಲಿ ಬೆ: 7.45ರ ವೇಳೆಗೆ ಟ್ರಾಫಿಕ್ ಪೊಲೀಸ್ ಠಾಣೆಯ ಮುಂದಿನ ಮುಖ್ಯ ಗೇಟ್ ಬಳಿ ಬಂದು, ದೂರುದಾರರನ್ನು ಕರೆದು ಮಾತನಾಡಿ, ಸ್ವಲ್ಪ ಸಮಯದ ನಂತರ ದೂರುದಾರರು ತನ್ನ ಬಳಿ ಇದ್ದ ಫಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಎದುರುದಾರರ ಕೈಗೆ ಕೊಟ್ಟಾಗ, ಎದುರುದಾರರು ಸದರಿ ಹಣವನ್ನು ಬಲಗೈಯಿಂದ ಪಡೆದು ಎರಡೂ ಕೈಗಳಿಂದ ಎಣಿಸಿ 6500/- ರೂ.ಗಳನ್ನು ಇಟ್ಟುಕೊಂಡು 500/- ರೂ. ಮುಖ ಬೆಲೆಯ ಒಂದು ನೋಟನ್ನು ದೂರುದಾರರಿಗೆ ಕೊಟ್ಟಿರುತ್ತಾರೆ. ಅಲ್ಲದೆ, ಬೇರೆಯವರಿಗೆ 200/- ರೂ. ಕೊಡಬೇಕೆಂದು ಹೇಳಿ, ಮತ್ತೆ ದೂರುದಾರರಿಂದ 100/- ರೂ. ಮುಖ ಬೆಲೆಯ ಎರಡು ನೋಟುಗಳನ್ನು ಪಡೆದುಕೊಂಡು ತನ್ನ ಶರ್ಟಿನ ಎಡಗಡೆ ಎದೆಯ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ಎದುರುದಾರರು ಠಾಣೆಯ ಕಾಂಪೌಂಡ್ ಒಳಗಡೆ ಹೋದಾಗ, ದೂರುದಾರರು ತನಿಖಾದಿಕಾರಿಗೆ ನಿಗದಿತ ಸೂಚನೆಯನ್ನು ನೀಡಿರುತ್ತಾರೆ. ಸದರಿ ಸೂಚನೆಯನ್ನು ಅನುಸರಿಸಿ ತನಿಖಾಧಿಕಾರಿ ಹಾಗೂ ಪಂಚ, ಸಿಬ್ಬಂದಿ ಸ್ಥಳಕ್ಕೆ ಬಂದು ದೂರುದಾರರನ್ನು ವಿಚಾರಿಸಿದಾಗ, ದೂರುದಾರರು ತನಿಖಾಧಿಕಾರಿಗೆ ಎದುರುದಾರರನ್ನು ತೋರಿಸಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರನ್ನು ಪರಿಚಯಿಸಿಕೊಂಡು ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ತನಿಖೆಯನ್ನು ಪ್ರಾರಂಭಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ ಸಿಬ್ಬಂದಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ಎದುರುದಾರರ ಎರಡೂ ಕೈ

ಬೆರಳುಗಳನ್ನು ಪ್ರತ್ಯೇಕವಾಗಿ ತೊಳೆದಾಗ ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ, ತನಿಖಾಧಿಕಾರಿ ಎದುರುದಾರರನ್ನು ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿಚಾರಿಸಿದಾಗ, ಎದುರುದಾರರು ತನ್ನ ಶರ್ಟಿನ ಎಡಗಡೆಯ ಎದೆಯ ಜೇಬಿನಲ್ಲಿ ಇದ್ದ ಹಣವನ್ನು ಹಾಜರುಪಡಿಸಿದಾಗ, ತನಿಖಾಧಿಕಾರಿಯ ಸೂಚನೆಯ ಮೇರೆಗೆ ಪಂಚರು ನೋಟುಗಳ ಮೌಲ್ಯ ಮತ್ತು ನಂಬರುಗಳನ್ನು ತಾಳೆ ಮಾಡಿದಾಗ, ಒಂದು 500/– ಮುಖ ಬೆಲೆಯ ನೋಟು ಕಡಿಮೆ ಇದ್ದು, ಉಳಿದ 500/– ಮುಖ ಬೆಲೆಯ 13 ನೋಟುಗಳನ್ನು ವಹಿಸುವಿಕೆಯ ಪಂಚನಾಮೆಯ ವೇಳೆಯಲ್ಲಿ ಬರೆದ ಪಟ್ಟಿಗೆ ತಾಳೆ ಮಾಡಿಕೊಂಡು ಖಾತ್ರಿಪಡಿಸಿಕೊಂಡಿರುತ್ತಾರೆ. ಸದರಿ ನೋಟುಗಳ ಜೊತೆ 100/– ರೂ ಮುಖ ಬೆಲೆಯ ಎರಡು ನೋಟುಗಳು ಸಹ ಕಂಡುಬಂದಿರುತ್ತವೆ. ಈ ಬಗ್ಗೆ ತನಿಖಾಧಿಕಾರಿ ಎದುರುದಾರರನ್ನು ವಿಚಾರಿಸಿದಾಗ, 500/– ರೂ. ಮುಖ ಬೆಲೆಯ ಒಂದು ನೋಟನ್ನು ದೂರುದಾರರಿಗೆ ವಾಪಸ್ಸು ಕೊಟ್ಟು, 100/– ರೂ ಮುಖ ಬೆಲೆಯ ಎರಡು ನೋಟುಗಳನ್ನು ಪಡೆದಿರುವ ಬಗ್ಗೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆಯ ಮೇರೆಗೆ ಪೊಲೀಸ್ ಸಿಬ್ಬಂದಿ ಎದುರುದಾರರ ಶರ್ಟಿನ ಎದೆಯ ಜೇಬಿನ ಒಳಭಾಗವನ್ನು ಗುರುತುಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರು ಲಂಚದ ಹಣ ಪಡೆದ ಬಗ್ಗೆ ಸಮಜಾಯಿಷಿಕೆಯನ್ನು ಕೇಳಿದಾಗ, ಎದುರುದಾರರು ತನ್ನ ಸಮಜಯಿಷಿಕೆಯನ್ನು " **ನಾನು ಪ್ರತಿದಿನದಂತೆ ನಿನ್ನೆ ದಿನ ದಿ: 21/02/2018 ರಂದು ಬೆಳಿಗ್ಗೆ 10–00ಗಂಟೆಗೆ ಠಾಣೆಯಲ್ಲಿ ನೇಮಿಸಿದ ತನಿಖಾ ಸಹಾಯಕ ಕರ್ತವ್ಯಕ್ಕಾಗಿ ಠಾಣೆಗೆ ಬಂದು ಠಾಣೆಯಲ್ಲಿದ್ದ ನಮ್ಮ ಪಿ.ಐ ರವರಾದ ಜೆ.ಲಕ್ಷ್ಮಣ ರವರು ತಮ್ಮ ಚೇಂಬರ್‌ನ ಟೇಬಲ್ ಬಳಿ ನಿಂತಿದ್ದ ಲಾರಿ ಚಾಲಕನನ್ನು ತೋರಿಸಿ ಹಣದ ಬಗ್ಗೆ ಮಾಡನಾಡಿ ತಿಳಿಸು ಅಂತಾ ತಿಳಿಸಿದ್ದರಿಂದ ನಾನು ನನಗೆ ಅಪರಿಚಿತನಾದ ಲಾರಿ ಚಾಲಕನ ಹತ್ತಿರ ಮಾತನಾಡುತ್ತಿರುವಾಗ ಸದರಿ ಲಾರಿ ಚಲಕನ ಫೋನ್‌ನಿಂದ ಯಾರೋ ನನಗೆ ಮಾತನಾಡಿ ಮಧ್ಯಾಹ್ನ ಠಾಣೆಗೆ ಬಂದು ಕಾಣುತ್ತೇನೆಂದು ತಿಳಿಸಿದ್ದರಿಂದ, ಅಧಿಕಾರಿಯ ಹತ್ತಿರ ಮಾತನಾಡು ಅಂತಾ ತಿಳಿಸಿದೆನು. ನಂತರ ಸದ್ರಿ ಲಾರಿ ಚಾಲಕನು ತಾನು ತೋರಣಗಲ್ಲಿಗೆ ಹೋಗಿ ಬರುತ್ತೇನೆಂದು ತಿಳಿಸಿ ಹೋಗಿದ್ದನ್ನು ನಾನು ನಮ್ಮ ಇನ್ಸ್‌ಪೆಕ್ಟರ್ ರವರಿಗೆ ಮೌಖಿಕವಾಗಿ ತಿಳಿಸಿದೆನು. ನಂತರ ಸಂಜೆ ನಾನು ಯಥಾ ಪ್ರಕಾರ 5–30 ಗಂಟೆಗೆ ಠಾಣೆಗೆ ಬಂದಾಗ ಲಾರಿ ಚಾಲಕನು ಹಣವನ್ನು ತಂದನೇ ಅಂತ ಮೌಖಿಕವಾಗಿ ತಿಳಿಸಿದಾಗ ನಾನು ತೋರಣಗಲ್ಲಿನಿಂದ ಚಾಲಕ ಬರುತ್ತಾನೆಂದು ತಿಳಿಸಿದೆನು. ರಾತ್ರಿ 11–30 ಗಂಟೆ ಸುಮಾರಿಗೆ ಲಾರಿ ಚಾಲಕ ಹಣವನ್ನು ತಂದಿರುವುದಾಗಿ ತಿಳಿಸಿದ್ದರಿಂದ ನಾನು ನನ್ನ ಮೊಬೈಲ್ ಸಂ: 9916369970 ನಿಂದ ನಮ್ಮ ಪಿ.ಐ ರವರ ಮೊಬೈಲ್ ನಂ: 9741806506 ನಂಬರ್‌ಗೆ ಪೋನ್ ಮಾಡಲು ಲಿಫ್ಟ್ ಮಾಡಲಿಲ್ಲದ ಕಾರಣ ಸದರಿ ಲಾರಿ ಚಾಲಕನಿಗೆ ಬೆಳಿಗ್ಗೆ 6–00 ಗಂಟೆಗೆ ಬರಲು ತಿಳಿಸಿದೆನು. ನಂತರ ನನಗೆ ಈ ದಿನ ಬೆಳಿಗ್ಗೆ 7–30 ಗಂಟೆಗೆ ಠಾಣೆಯ ಹೆಚ್.ಸಿ.157 ರವರಾದ ಪ್ರಕಾಶ್ ರವರು ನನ್ನ ಫೋನಿಗೆ ಕಾಲ್ ಮಾಡಿ ಬಳ್ಳಾರಿ ಫಾರೆಸ್ಟ್ ಕ್ವಾಟರ್ಸ್ ಹತ್ತಿರ ಆಕ್ಸಿಡೆಂಟ್ ಆಗಿ ಎಂ.ಎಲ್.ಸಿ ಬಂದಿದ್ದು, ನೀನು ಬೇಗ ಬಾ ಅಂತಾ ತಿಳಿಸಿದ್ದರಿಂದ ನಾನು ಬೆಳಿಗ್ಗೆ 07–45 ಗಂಟೆ ಸುಮಾರಿಗೆ ಠಾಣೆಗೆ ಬಂದಾಗ ಮೇಲ್ಕಂಡ ಲಾರಿ ಚಾಲಕನು ಹಣ ತಂದಿರುವುದಾಗಿ ತಿಳಿಸಿದ ಮೇರೆಗೆ ನಾನು ಲಾರಿ ಚಾಲಕನಿಂದ ಕೋರ್ಟಿಗೆ ಕಟ್ಟುವ ಹಣ ಇರಬಹುದೆಂದು ಸದ್ರಿ ಲಾರಿ ಚಾಲಕನು**

**ಕೊಟ್ಟಂತಹ ಹಣವನ್ನು ಪಡೆದಿರುತ್ತೇನೆ. ನಂತರ ಠಾಣೆಯ ಒಳಗಡೆ ಬಂದೆನು ಎಂದು ಹೇಳಿರುತ್ತಾರೆ. ನಂತರ ತನಿಖಾಧಿಕಾರಿಯು ಎದುರುದಾರರ ಸ್ವ-ರಕ್ಷಣೆ ಹೇಳಿಕೆ ಬಗ್ಗೆ ದೂರುದಾರರನ್ನು ವಿಚಾರಿಸಲು ಅವರು ಎದುರುದಾರರು ಸ್ವ-ರಕ್ಷಣ ಹೇಳಿಕೆಯಲ್ಲಿ ತಿಳಿಸಿದ ವಿಷಯಗಳು ಪೂರ್ತಿ ನಿಜವಿರುವುದಿಲ್ಲ, ದಾಖಲಾತಿ ಮತ್ತು ಲಾರಿ ಕೀ ಅನ್ನು ನೀಡಲು ಲಂಚದ ಹಣವನ್ನು ಸ್ವೀಕರಿಸಿದ್ದು, ಕೋರ್ಟಿಗೆ ಕಟ್ಟುವ ಫೀ ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ."** ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ದಿನಾಂಕ: 22-02-2018 ರಂದು ಪಂಚರ ಸಮಕ್ಷಮ ಹಣ ಜಪ್ತಿ ಪಂಚನಾಮೆಯನ್ನು ಬೆ: 7.50 ರಿಂದ ಮ: 2.30 ರವರೆಗೆ ಬರೆದಿರುತ್ತಾರೆ.

vi. ದೂರುದಾರರ ಮತ್ತು ಎದುರುದಾರರ ನಡುವೆ ಲಂಚದ ಹಣಕ್ಕೆ ಸಂಬಂಧಿಸಿದಂತೆ, ಸಂಭಾಷಣೆಯ ಧ್ವನಿಗಳು ಮತ್ತು ಸಂಗ್ರಹಿಸಿದ ಮಾದರಿ ಧ್ವನಿಗೆ ಹೋಲಿಕೆ ಇರುವುದಾಗಿ, ವಿಧಿ-ವಿಜ್ಞಾನ ಪ್ರಯೋಗಾಲಯ ವರದಿಯಿಂದ ಧೃಢಪಟ್ಟಿರುತ್ತದೆ.

vii. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

viii. ಗೌರವಾನ್ವಿತರ ಆದೇಶದ ಅನ್ವಯ ಎದುರುದಾರರಿಗೆ ದಿ: 02/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಅಥವಾ ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ದಿ: 15/09/2021 ರಂದು ತನ್ನ ಸಮಜಾಯಿಷಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿರುದ್ಧ ಮಾನ್ಯ ಪೊಲೀಸ್ ಅಧೀಕ್ಷಕರು, ಬಳ್ಳಾರಿ ಜಿಲ್ಲೆ ರವರ ಆದೇಶ 12/ಇವಿ/ಸಿಬ್ಬಂದಿ-4/2021. ಜಿ.ಆ.ಸಂ.634/2020 ದಿ: 28/07/2021 ಮೇರೆಗೆ ಇಲಾಖಾ ವಿಚಾರಣೆಯನ್ನು ಕೈಗೊಂಡು, ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತಿನ ನಡವಳಿಗಳು) ನಿಯಮಾವಳಿಗಳು 1965 (ತಿದ್ದುಪಡಿ 1989) ನಿಯಮ 6ರ ಅನ್ವಯ ಇಲಾಖಾ ವಿಚಾರಣಾ ಅಧಿಕಾರಿಯನ್ನಾಗಿ ಎಂ.ಜಿ.ಸತ್ಯನಾರಾಯಣ ರಾವ್, ಡಿಎಸ್‌ಪಿ, ಬಳ್ಳಾರಿ ಗ್ರಾಮಾಂತರ ಉಪವಿಭಾಗ, ಬಳ್ಳಾರಿ ಇವರನ್ನು ನೇಮಕಮಾಡಿ ಜ್ಞಾಪನಾ ಪತ್ರ ಹೊರಡಿಸಿರುತ್ತಾರೆ. ಹಾಗಾಗಿ ತನ್ನ ವಿರುದ್ಧ ಈಗಾಗಲೇ ಹಮ್ಮಿಕೊಂಡಿರುವ ವಿಚಾರಣೆಗೆ ಸಹಕರಿಸುತ್ತಿದ್ದೇನೆ ಎಂದು ನಿವೇದಿಸುತ್ತಾ, ಜಿಲ್ಲಾ ಪೊಲೀಸ್ ಅಧಿಕಾರಿಗಳು, ಬಳ್ಳಾರಿ ಜಿಲ್ಲೆ, ರವರ ನಡವಳಿಗೆಗಳ ಪ್ರತಿಯನ್ನು ಲಗತ್ತಿಸಿರುತ್ತಾರೆ ಹಾಗೂ ವಿಚಾರಣಾ ಅಧಿಕಾರಿಗಳು ಎದುರುದಾರರಿಗೆ ಆರೋಪಣೆಗೆ ಸಮಜಾಯಿಷಿಕೆಯನ್ನು ಕೇಳಿದ ಬಗ್ಗೆ, ಆರೋಪ ಜ್ಞಾಪನಾ ಪತ್ರ ಲಗತ್ತಿಸಿರುತ್ತಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮುಗಿದ ಬಗ್ಗೆ ಯಾವುದೇ ಆದೇಶವನ್ನು ಲಗತ್ತಿಸಿರುವುದಿಲ್ಲ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿಗಳು

ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಎದುರುದಾರರ ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

3. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳನ್ನು ಪರಿಶೀಲಿಸಿದಾಗ, ಎದುರುದಾರರ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ ಸಮಂಜಸ / ಸಮಾಧಾನಕರ ಕಾರಣ ಇಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

4. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

22/12/21

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು–1
ಕರ್ನಾಟಕ ರಾಜ್ಯ, ಬೆಂಗಳೂರು